

## ಬರದಲ್ಲೂ ಬತ್ತದ ಧಾರೆ!

ಈ ಬಾರಿಯ ಬೇಸಿಗೆಯಲ್ಲಿ ಕರಾವಳಿಯ ಬಹುತೇಕ ದೇವಸ್ಥಾನಗಳಲ್ಲೂ ನೀರಿನ ಅಭಾವದಿಂದಾಗಿ ಯಾತ್ರಾರ್ಥಿಗಳು ಪರದಾಡುವ ಪರಿಸ್ಥಿತಿ ಉಂಟಾಗಿದ್ದು ಬರದ ದಾಹದ ಬಿಸಿ ತಟ್ಟಿತ್ತು. ಆದರೆ, ಮಂಗಳೂರಿನ ಮೂಡಬಿದಿರೆ ಬಳಿ ಪ್ರಕೃತಿ ಸೌಂದರ್ಯದಿಂದ ಕಂಗೊಳಿಸುತ್ತಿರುವ ದರೆಗುಡ್ಡೆ ವಿಟ್ಟಲ ಸೋಮನಾಥೇಶ್ವರ ದೇವಾಲಯದಲ್ಲಿ ವಿಸ್ಮಯಕರ ಅಂಶವೊಂದು ಬೆಳಕಿಗೆ ಬಂದಿದೆ. ಮಂದಿರದ ಎಡಪಕ್ಕದ ಮೂರುಮಲೆ ಕಾಡಿನ ತಪ್ಪಲಲ್ಲಿರುವ 3 ಕುಂಡಗಳಲ್ಲಿ ಒಂದಿನಿತೂ ನೀರು ಕಡಿಮೆಯಾಗಿಲ್ಲ! ಮಾತ್ರವಲ್ಲದೆ ಚಿತ್ರದಲ್ಲಿ ಗೋಚರಿಸುವಂತೆ ಒಂದೆಳೆ ನೀರು ಸದಾ ಗಣಪತಿಯ ವಿಗ್ರಹದ ಮೇಲೆ ನೈಸರ್ಗಿಕ ಅಭಿಷೇಕದ ಧಾರೆಯೆರೆಯುತ್ತಿದ್ದು ಕೆಳಗೆ ಸುಮಾರು ಮೂರಡಿ ಸ್ವಚ್ಛ ನೀರು ಸದಾ ನೆಲೆ ನಿಂತಿರುತ್ತದೆ. ಕ್ಷೇತ್ರದ ಕಾರಣಿಕವೋ, ವೈಜ್ಞಾನಿಕ ವಿಸ್ಮಯವೋ ತಿಳಿದಿಲ್ಲ; ಭೋರ್ಗರೆಯುವ ಮಳೆ ಸುರಿದರೂ, ಕಂಗೆಡುವ ಬರ ಪರಿಸ್ಥಿತಿಯಿದ್ದರೂ ನೂರಾರು ವರ್ಷಗಳಿಂದ ಇಲ್ಲಿ ಮಾತ್ರ ಅಭಿಷೇಕೋಪಾದಿಯಲ್ಲಿ ಒಂದೇ ಪ್ರಮಾಣದ ಪರಿಶುದ್ಧ ನೀರು ಹರಿಯುತ್ತಿದ್ದು ಸೋಜಿಗ ಸೃಜಿಸಿದೆ!

—ರಮಣ್ ಶೆಟ್ಟಿ ರೆಂಜಾಳ್, ಮುಂಬೈ



## ಮದುವೆಯ ಸವಿನೆನಪು..!

ಇತ್ತೀಚೆಗೆ ನಮ್ಮ ನೆಂಟರೊಬ್ಬರ ಮದುವೆಗೆ ಹೋದಾಗ ಅಕ್ಷತೆ ಹಾಕಿದ್ದು, ಊಟ, ಉಡುಗೊರೆ, ಹರಟೆ... ಎಲ್ಲವೂ ಆಯಿತು. ಅದರಲ್ಲೇನು ವಿಶೇಷ ಅಂತೀರಾ..? ಕಾರ್ಯಕ್ರಮ ಮುಗಿಸಿ ಹೊರಟಾಗ ಫಲತಾಂಬೂಲ ಅಂತ ತೆಂಗಿನಕಾಯಿ ಜೊತೆ ಪುಟ್ಟ ಕವರ್‌ನಲ್ಲಿ ಒಂದಿಷ್ಟು ಫಲ, ಪುಷ್ಪಗಳ ಒಣ ಬೀಜಗಳನ್ನು ನೀಡಿದ್ದರು. ಮನೆಗೆ ಹೋಗಿ ಹಿತ್ತಲಿನಲ್ಲೋ, ಪುಟ್ಟ ಕುಂಡದಲ್ಲೋ ಹಾಕಿ ನೀರುಣಿಸಿ, ಅದರಲ್ಲಿ ಫಲ, ಪುಷ್ಪ ಅರಳಿದಲ್ಲಿ ಪ್ರಕೃತಿ ಮಾತೆಗೆ ಕಿರುಕಾಣಿಕೆ ನೀಡಿದಂತೆಯೂ ಆಯ್ತು. ಮದುವೆಯ ಸವಿನೆನಪು ಮರುಕಳಿಸಿದಂತೆಯೂ ಆಯ್ತು.

—ಅನು ಬೊಮ್ನಳ್ಳಿ, ಶಿರಸಿ




## ಗುಹೆಯೊಳಗಣ ಗುಡಿ

ದೊಡ್ಡ ದೊಡ್ಡ ಕಲ್ಲು ಬಂಡೆಗಳು ಜೋತಾಡುತ್ತಿವೆನೋ ಅನಿಸುತ್ತಾ ಅಚ್ಚರಿ ಮೂಡಿಸುವ ನಿಸರ್ಗ ನಿರ್ಮಿತ ವಿಸ್ಮಯದ ಗುಹೆಯೊಂದು ಉಡುಪಿಯಿಂದ 28 ಕಿಮೀ ದೂರದ ಶಿರಿಯಾರ ಗ್ರಾಮದ ಪಡುಮುಂಡುವಿನಲ್ಲಿದೆ. ಕಲ್ಲು ಪೊಟರೆಯೊಳಗೆ ಶಿರ ಬಗ್ಗಿಸಿ ಮೆಟ್ಟಿಲು ಹತ್ತುತ್ತಿದ್ದಂತೆ ಪುರಾತನ ಕಲ್ಲು ಗಣಪತಿ ಗುಡಿ ಎದುರಾಗುತ್ತದೆ. ಉದ್ಭವ ಮೂರ್ತಿಗಳಾದ ಶಿವ, ಪಾರ್ವತಿಯರ ಜೊತೆಗೆ ಪುತ್ರ ಗಣಪತಿ ಒಂದೇ ಪೀಠದಲ್ಲಿರುವುದು ಇಲ್ಲಿನ ವಿಶೇಷತೆ. ಸುಮಾರು ಐದು ನೂರು ವರ್ಷಗಳ ಹಿಂದೆ ಬಾರ್ಕೂರು ರಾಜರು ಈ ಗುಹೆಯೊಳಗೆ ಗುಡಿ ನಿರ್ಮಿಸಿದರೆಂದು ಹೇಳಲಾಗುತ್ತಿದೆ. ಗುಹೆಯ ಸುತ್ತಲು ಹಸಿರು ಹೊದ್ದ ಮರಗಿಡಗಳು, ಪಕ್ಕದಲ್ಲಿರುವ ದೊಡ್ಡಹೊಳೆಯ ನೀರ ರಾಶಿ ಮನಸೆಳೆಯುತ್ತಾ ಪ್ರಕೃತಿಯ ಮಡಿಲಲ್ಲಿ ಕಳೆದು ಹೋಗುವಂತೆ ಮಾಡುತ್ತವೆ!

—ಡಾ. ಮುರಳೀಧರ ಕಿರಣಕೆರೆ, ಶಿವಮೊಗ್ಗ

